ಆಗಮಿಸಿ ಅಲ್ಲಿದ್ದವರನ್ನು ಮಾತನಾಡಿಸಿದಳು. ಕೆಲವರು ಅಲ್ಲಿ ಮಾತನಾಡದೆ ಕೆಫೆಯಲ್ಲಿ ಅವಳ ಪ್ರಶ್ನೆಗಳಿಗೆ ಉತ್ತರ ನೀಡಿದರು. ಅವಳು ಟರ್ನರ್ ಮಹಾಶಯನನ್ನು ನೋಡಬಯಸಿದಳು. ಇದರ ಸುಳಿವು ಸಿಕ್ಕಿದ್ದ ಟರ್ನರ್ ಕಚೇರಿ ಬಿಟ್ಟು ಮನೆಗೆ ಧಾವಿಸಿದ. ವರದಿಗಾರ್ತಿ ಮತ್ತೊಮ್ಮೆ ಬಂದಾಗ ಅವನು ಇದ್ದೂ ಇಲ್ಲವೆಂದು ಹೇಳಿಸಿದ.

ಮುಂದಿನವಾರ ಪತ್ರಿಕೆಯ ಉನ್ನತ ಶಿಕ್ಷಣದ ಪರಿವಿಡಿಯಲ್ಲಿ ದೀರ್ಘ ವರದಿ ಪ್ರಕಟವಾಯಿತು. ಅದರ ಪ್ರಕಾರ ಆ ಪ್ರಯೋಗಾಲಯದಲ್ಲಿ ಲೈಂಗಿಕ ಕಿರುಕುಳ ಮತ್ತು ಪಕ್ಷಪಾತ, ತಾರತಮ್ಯ ಎಲ್ಲವೂ ತಾಂಡವವಾಡುತ್ತಿದ್ದವು. ಅಲ್ಲಿ ಮೈಮನಗಳನ್ನು ಮಾರಿಕೊಳ್ಳದಿದ್ದರೆ ಯಾರಿಗೂ ಉಳಿಗಾಲವಿರಲಿಲ್ಲ. ಸಾಲದ್ದಕ್ಕೆ ನಯನಾ, ಈವಾನ್ ಮತ್ತಿಬ್ಬರ ಹೆಸರುಗಳನ್ನೂ ಉಲ್ಲೇಖಿಸಲಾಯಿತು.

ವಿಶ್ವವಿದ್ಯಾಲಯದ ಫೋಟೊ ಕಾಪಿ ಮೆಷಿನ್ನುಗಳು ಎಡೆಬಿಡದೆ ದುಡಿಯಬೇಕಾಯಿತು. ಎಲ್ಲರೂ ವರದಿಯನ್ನು ಕಾಪಿಮಾಡಿ ಹರಡಿದ್ದೆ ಹರಡಿದ್ದು. ಆದರೆ, ವರದಿಯನ್ನು ನೋಡಿ ದಿಗ್ಭ್ರಾಂತರಾಗಿದ್ದ ನಯನಾಳ ತಂದೆ ಮತ್ತು ತಾಯಿ. ಇಬ್ಬರೂ ಪ್ರಯೋಗಾಲಯಕ್ಕೇ ಧಾವಿಸಿ ಬಂದರು. ಮಗಳು ಅಲ್ಲಿರಲಿಲ್ಲ. ಅವಳ ಮನೆಗೆ ಬಂದರು. ಅಲ್ಲಿ ಸಪ್ಪಗೆ ಕುಳಿತಿದ್ದ ನಯನಾ ಸಿಕ್ಕಳು. ತಂದೆ ತಾಯಿಗೆ ಕೇಳಲು ಧೈರ್ಯವಿಲ್ಲ. ಆದರೂ ಮಗಳು ಹೇಳಿದಳು,

"ಪೇಪರಿನಲ್ಲಿ ಬಂದಿರುವುದು ಶುದ್ಧ ಸುಳ್ಳು. ಯಾರೋ ವಿಲಿಯಂಗೆ ಆಗದವರು ಹೇಳಿ ಬರೆಸಿದ್ದಾರೆ. ನೀವು ಹೆದರಿಕೋ ಬೇಡಿ.'' ಎಂದೆಲ್ಲಾ ಹೇಳಿ ನುಸುಳಿಕೊಳ್ಳ ಹೋದಳು.

ತಂದೆ ಏನನ್ನೂ ಕೇಳಿಸಿಕೊಳ್ಳದೆ, "ಸಾಕು. ಇನ್ನೇನೂ ನೀನು ರಿಸರ್ಚ್ ಮಾಡಿ ಹೀಗೆ ಹೆಸರು ತೊಗೊಳೋದು ಬೇಡ. ನಡಿ ಮನೆಗೆ.''

"ಇನ್ನೂ ಒಂದೆರಡು ರಿಸಲ್ಟ್ ಬರೋದಿದೆ. ಅದನ್ನ ಮುಗಿಸಿ ರಿಸೈನ್ ಮಾಡ್ತೀನಿ.'' ಎಂದು ತಂದೆ ಆಶ್ವಾಸನೆ ನೀಡಿದಳು. ಮನಸ್ಸಿಲ್ಲದ ಮನಸ್ಸಿನಿಂದ ಅವರು ಮನೆಗೆ ತೆರಳಿದರು.

ಪತ್ರಿಕಾ ವರದಿ ಹೊರಬರುತ್ತಿದ್ದಂತೆ ವಿಶ್ವವಿದ್ಯಾಲಯ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಪ್ರತ್ಯೇಕ ಸಮಿತಿಯನ್ನೇ ರಚಿಸಿ ಟರ್ನರ್ ವಿರುದ್ಧ ದೂರಿನ ವಿಚಾರಣೆ ನಡೆಸುವಂತೆ ಕೋರಿತು. ಸಮಿತಿಯ ಮುಂದೆ ಸಾಕ್ಷಿ ಆಧಾರಗಳನ್ನು ನೀಡಲು ಸ್ಟೆಲ್ಲಾ ಇತರರು ಸಿದ್ಧತೆ ಪ್ರಾರಂಭಿಸಿದರು.

ಒಂದು ವಾರದ ಗೈರುಹಾಜರಿಯ ನಂತರ ನಯನಾ ಕೆಲಸಕ್ಕೆ ಹಾಜರಾದಳು. ಒಂದೆರಡು ವಾರಗಳಿಂದ ಟರ್ನರ್ ಅತ್ತ ಸುಳಿದಿಲ್ಲ ಎಂಬುದು ತಿಳಿಯಿತು. ಮತ್ತೆರಡು ವಾರಗಳು ಕಳೆದವು. ಟರ್ನರ್ ಪತ್ತೆಯಿಲ್ಲ.

ಆ ಸೋಮವಾರ ಬಯೋ ಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥೆ ಪ್ರೊಫೆಸರ್ ಮಾರ್ಗರೆಟ್ ಒಂದು ತುರ್ತು ಸಭೆಯನ್ನು ಕರೆದು ಪ್ರಯೋಗಾಲಯದ ಸಿಬ್ಬಂದಿಯನ್ನೆಲ್ಲಾ ಆಹ್ವಾನಿಸಿದಳು. ಎಲ್ಲರೂ ತುಸು ಗಾಬರಿಯಾಗಿಯೇ ಬಂದು ನೆರೆದರು. ಮಾರ್ಗರೆಟ್ ನುಡಿದಳು,

"ಪ್ರೊಫೆಸರ್ ವಿಲಿಯಮ್ ಟರ್ನರ್ ಅವರು, ಅವರದೇ ಆದ ಕಾರಣಗಳನ್ನು ಕೊಟ್ಟು, ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ್ದಾರೆ. ಅದು ಇಂದಿನಿಂದಲೇ ಜಾರಿಗೆ ಬರುತ್ತಿದೆ. ಇದರಿಂದ ಅನೇಕರಿಗೆ ತೊಂದರೆ ಆಗುತ್ತದೆ ಎಂಬುದು ನನಗೆ ಗೊತ್ತಿರುವ ವಿಚಾರವೇ. ಮುಖ್ಯವಾಗಿ ಅನೇಕ ಕಂಪೆನಿಗಳಿಂದ ಅವರ ಅಧ್ಯಯನಗಳಿಗೆ ಬರುತ್ತಿದ್ದ ಹಣಕಾಸು ಇನ್ನು ಇರುವುದಿಲ್ಲ. ಆದರೆ, ಈ ವರ್ಷದ ಕೊನೆಯವರೆಗೆ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಮತ್ತು ಸಹಾಯಕರ ವೇತನ ಎರಡನ್ನೂ ವಿಶ್ವವಿದ್ಯಾಲಯವೇ ಭರಿಸುತ್ತದೆ. ನಡುನೀರಿನಲ್ಲಿರುವ ವಿದ್ಯಾರ್ಥಿಗಳು ಮಿಕ್ಕ ಪ್ರೊಫೆಸರುಗಳ ಮಾರ್ಗದರ್ಶನ ಪಡೆಯಬಹುದು. ಸಹಾಯಕರು ಇಲ್ಲಿ ಮತ್ತು ಮಿಕ್ಕ ವಿಶ್ವವಿದ್ಯಾಲಯಗಳಲ್ಲಿ ತೆರವಾಗಿರುವ ಸ್ಥಾನಗಳಿಗೆ ಅರ್ಜಿಹಾಕಿಕೊಳ್ಳಬಹುದು. ಟರ್ನರ್ ಅವರಿಂದ ಅವರೆಲ್ಲಿದ್ದಾರೆ ಈಗ, ಮುಂದೇನು ಮಾಡುತ್ತಾರೆ ಎಂಬುದರ ಬಗ್ಗೆ ಏನೂ ತಿಳಿದಿಲ್ಲ. ಹಾಗೆ ಏನಾದರೂ ವರ್ತಮಾನ ಬಂದಲ್ಲಿ ತಿಳಿಸುತ್ತೇನೆ. ಧನ್ಯವಾದಗಳು."

ಮಾರ್ಗರೆಟ್ ರೂಮಿನಿಂದ ಹೊರಹೋದಾಗ ಎಲ್ಲರೂ ಪ್ರಚಂಡ ಕರತಾಡನ ಮಾಡಿ ಒಬ್ಬರನ್ನೊಬ್ಬರು ತಬ್ಬಿಕೊಂಡು ಕುಣಿದಾಡಿದರು. ಅವರಿಗೆ ಜಯ ಲಭಿಸಿತ್ತು. ಒಂದು ನಿಮಿಷದೊಳಗೆ ನಯನಾ ಅಲ್ಲಿಂದ ಮಾಯವಾಗಿದ್ದಳು.